24KAL15

156

# ಮೊದಲನೆಯ ಚತುರ್ಮಾಸ ಬಿ.ಸಿ.ಎ. ಪರೀಕ್ಷೆ – ನವೆಂಬರ್/ಡಿಸೆಂಬರ್ 2025

## ಸ್ಕೀಮ್: ಪರಿಷ್ಕೃತ ಸಿ.ಬಿ.ಸಿ.ಎಸ್

## ಕನ್ನಡಭಾಷೆ ಪತ್ರಿಕೆ–೧

## ಗಣಕ ಸೌರಭ – ೧

ಸಮಯ: 3 ಗಂಟೆ — ಗರಿಷ್ಠ ಅಂಕ: 80

**1.** ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ. CO1, CO2, CO3, CO4 — **8x1 =8**

೧. ಬಿ.ಎಂ.ಶ್ರೀ ಅವರ ಪೂರ್ಣ ಹೆಸರೇನು? LL1

೨. ನಾಗವಳ್ಳಿ ಕರಿಯಪ್ಪನ ಮಗಳ ಹೆಸರೇನು? LL1

೩. 'ಗೋಕುಲ ನಿರ್ಗಮನ' ಕೃತಿಯ ಕರ್ತೃ ಯಾರು ? LL1

೪. ಆದ್ಯ ಪಾತ್ರ ಇರುವ ಪ್ರಬಂಧ ಯಾವುದು? LL1

೫. 'ನಿತ್ಯೋತ್ಸವ ಕವಿ.' ಎಂದು ಹೆಸರಾದವರು ಯಾರು? LL1

೬. "ಗುಜ್ಜಾನೆಮರಿ" ಎಂದರೆ ಯಾರು? LL1

೭. ಆಗಾಗ ಸಂಬಂಧಗಳ ಕ್ರೋಟನ್ನುಗಳಿಗೆ ಏನು ಮಾಡಬೇಕು? LL1

೮. 'ಶ್ರೀಮಂತ ದೇಶಗಳ ಬಡಜನತೆ' ಯಾವ ದೇಶದ ಪ್ರವಾಸಿ ಕಥನವಾಗಿದೆ? LL1

**2.** ಈ ಕೆಳಗಿನ ನಾಲ್ಕು ಪದಗಳಿಗೆ ಅರ್ಥ ಬರೆಯಿರಿ. CO1, CO2, CO3, CO4 LL1 — **4 x ½ =2**

ತೊಡಿಗೆ, ರವ, ರಾಸೆ, ಹಸುಳೆ, ಹುಸಿ, ಪುಳಕ, ಗುಳಿಗೆ, ಮಾಗು.

**3.** ಈ ಕೆಳಗಿನ ಎರಡು ಪದ್ಯಭಾಗಗಳಿಗೆ ಭಾವಾರ್ಥ ಬರೆಯಿರಿ. — **2x5=10**

೧. ಕನ್ನಡ ನುಡಿ ನಮ್ಮ ಹೆಣ್ಣು — CO1 LL2

ನಮ್ಮ ತೋಟದಿನಿಯ ಹಣ್ಣು;
ಬಳಿಕ, ಬೇರೆ ಬೆಳೆದ ಹೆಣ್ಣು
ಬಳಿಗೆ ಸುಳಿದಳು;
ಹೊಸದು ರಸದ ಬಳ್ಳಿ ಹಣ್ಣು
ಒಳಗೆ ಸುಳಿದಳು;

ಅಥವಾ

ಭಿಕ್ಷೆ? ನಿನ್ನನ್ನಳಿಗೆ ಭಿಕ್ಷೆ? CO1 LL2

ಇಂದಿನೀ ವೇಷದಿಂ ನೀಂ ಭಿಕ್ಷುಣಿಯೆ ದಿಟಂ!

ನಾನ್ ಪೊತ್ತಿಸಿದ ಕಿಚ್ಚನಾನ್ ನಂದಿಸಲ್ಕೆನಗೆ

ನೀಡು ನಿನ್ನನುಮತಿಯ ಭಿಕ್ಷೆಯಂ.

೨. ರಾಸೆಯನರ್ಥಕೆ ತಡೆದವಳು CO2 LL2

ಹಾಡನು ಪಾಡಂ ಗೈದವಳು

ಸುವ್ವಿಗೆ ಸುಯ್ಯಲ ತಂದವಳು ನಮ

ಕೃಷ್ಣನ ಹೃದಯದಿ ನಿಂದವಳು

**ಅಥವಾ**

"ಹೊತ್ತು ಹೋದಾಮೇಲೆ ಯಾರು ಬಲ್ಲರೊ ನಿನ್ನ CO2 LL2

ಹೊತ್ತು ಹೋಗದ ಮುನ್ನ

ಮೃತ್ಯು ಮುಟ್ಟದ ಮುನ್ನ

ತೊತ್ತುಗೆಲಸವ ಮಾಡು".

4. ಎರಡು ವಾಕ್ಯಗಳ ಸಂದರ್ಭ ಸ್ವಾರಸ್ಯವನ್ನು ಬರೆಯಿರಿ. **2x5=10**

೧. ನಾನು ನಾನೇ ಆಗಿ, ಈ ನೆಲದಲ್ಲಿ ಬೇರೊತ್ತಿದರೂ ಬೀಗಿ. CO3 LL2

**ಅಥವಾ**

ಆಟ ಬಲ್ಲ ರಾಮ ದಾಳ ಉರುಳಿಸಿ ಗೆದ್ದ; CO3 LL2

೨. ಇಲ್ಲಿ ನಮ್ಮದೆನ್ನುವುದೇನಿದೆ, ಎಲ್ಲವೂ ಮಾಹಿತಿಗಳಾಗಿ ಮಾರಾಟದ ಸರಕಾಗಿರುವಾಗ! CO4 LL2

**ಅಥವಾ**

ಬೀಜ ಬಿತ್ತಿ, ಮೊಳಕೆಯೊಡೆದು ಎತ್ತರೆತ್ತರದ ಮರವಾಗಿ ಬೀಗುತ್ತೇನೆ. CO4 LL2

5. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ಪುಟಕ್ಕೆ ಕಡಿಮೆಯಿಲ್ಲದಂತೆ ಸ್ವಂತ ಅಭಿಪ್ರಾಯವನ್ನು ಬರೆಯಿರಿ. **4x2 ½=10**

೧. ದೇವದಾಸಿ ಪದ್ಧತಿ CO1 LL3

೨. ಪರಿಶುದ್ಧ ಪ್ರೀತಿ CO2 LL3

೩. ಮಹಿಳಾ ಸಮಾನತೆ CO3 LL3

೪. ಬಡತನ ನಿರ್ಮೂಲನೆ CO4 LL3

**ಪು.ತಿ.ನೋ.**

6. ಈ ಕೆಳಗಿನ ಪ್ರಶ್ನೆಗಳಲ್ಲಿ ಪ್ರತಿ ಪ್ರಶ್ನೆಗೆ ಮೂರು ಪುಟಗಳು ಮೀರುವಂತೆ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ. 4x10=40

೧. ಕನ್ನಡ ಮತ್ತು ಇಂಗ್ಲಿಷ್ ಸಮನ್ವಯತೆ 'ಕಾಣಿಕೆ' ಕವಿತೆಯಲ್ಲಿ ಹೇಗೆ ಮೂಡಿ ಬಂದಿದೆ? ವಿಶ್ಲೇಷಿಸಿ. CO1 LL3

**ಅಥವಾ**

ಚೆನ್ನಮ್ಮನ ಮುಗ್ಧತೆ ಮತ್ತು ಅಸಹಾಯಕತೆಗಳು 'ನಾನು ಕೊಂದ ಹುಡುಗಿ' ಕತೆಯಲ್ಲಿ ಹೇಗೆ ನಿರೂಪಿತಗೊಂಡಿದೆ? ವಿವರಿಸಿ. CO1 LL2

೨. ರಾಧೆಯನ್ನು ಕಾಣದ ಕೃಷ್ಣನ ಹಂಬಲ 'ಎಲ್ಲವಳೆಲ್ಲವಳೆಲ್ಲವಳು' ಕವಿತೆಯಲ್ಲಿ ಹೇಗೆ ನಿರೂಪಿತಗೊಂಡಿದೆ? ವಿಶ್ಲೇಷಿಸಿ. CO2 LL3

**ಅಥವಾ**

ತಾತ–ಮೊಮ್ಮಗಳ ಸಂಬಂಧದ ಮಹತ್ವ 'ಜೀವದಾಯಿನಿ' ಪ್ರಬಂಧದಲ್ಲಿ ಹೇಗೆ ಅನಾವರಣಗೊಂಡಿದೆ? ವಿಮರ್ಶಿಸಿ.

೩. ಅಲ್ಪಸಂಖ್ಯಾತರ ಸಾಮಾಜಿಕ ಸಂಕಷ್ಟಗಳನ್ನು 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಕವಿತೆ ಹೇಗೆ ಧ್ವನಿಸುತ್ತದೆ? ಚಿತ್ರಿಸಿ. CO3 LL3

**ಅಥವಾ**

ಸಾಮಾಜಿಕ ಶೋಷಣೆ 'ಅಮಾಸ' ಕತೆಯಲ್ಲಿ ಹೇಗೆ ಅನಾವರಣಗೊಂಡಿದೆ? ವಿವರಿಸಿ. CO3 LL2

೪. ಹೆಣ್ಣು ತನ್ನ ಅಸ್ತಿತ್ವಕ್ಕಾಗಿ ಹಂಬಲಿಸುವ ಬಗೆಯನ್ನು 'ಒಂದಿಷ್ಟು ಹಸಿಮಣ್ಣು' ಕವಿತೆಯ ಹಿನ್ನೆಲೆಯಲ್ಲಿ ವಿವರಿಸಿ. CO4 LL3

**ಅಥವಾ**

ನಿರೂಪಕನ ಅಂತಃಕರಣವನ್ನು ಮುಟ್ಟುವ 'ಸಂಬಂಧ' ಕತೆಯ ವೈಶಿಷ್ಟ್ಯವನ್ನು ವಿವರಿಸಿ. CO4 LL2

** *** **